**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಗ್ಗಡದೇವನಕೋಟೆ**

# ಸಿ.ಸಿ.ನಂ.768/2017

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಸುರೇಶ್ | ಸಿ.ಡಬ್ಲ್ಯೂ-9 |
| ತಂದೆಯ ಹೆಸರು | : | ಸಿದ್ದರಾಜ ಅರಸ್ | ಪಿ.ಡಬ್ಲ್ಯೂ-5 |
| ವಯಸ್ಸು | : | 66 ವರ್ಷ | – |
| ಉದ್ಯೋಗ | : | ನಿವೃತ್ತ ಪಿ.ಎಸ್.ಐ | ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕಃ 05.07.2024. |
| ವಾಸಸ್ಥಳ | : | ಮೈಸೂರು | – |

**ಮುಖ್ಯ ವಿಚಾರಣೆಃ ಎಪಿಪಿ ರವರಿಂದಃ**

ನಾನು ಬೀಚನಹಳ್ಳಿ ಪೊಲೀಸ್ ಠಾಣೆಯಲ್ಲಿ ಅಕ್ಟೋಬರ್ 2016 ರಿಂದ ಡಿಸೆಂಬರ್ 2017 ರವರೆಗೆ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 01.04.2017 ರಂದು ಈ ಕೇಸಿನ ಕಡತವನ್ನು ಚಾಸಾ- 1 ರವರಿಂದ ಪಡೆದುಕೊಂಡು ತನಿಖೆಯನ್ನು ಮುಂದವರೆಸಿ ಅಮಾನತ್ತುಪಡಿಸಿಕೊಂಡಿದ್ದ ಮದ್ಯದ ಪೌಚುಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸುವ ಸಲುವಾಗಿ ನಮ್ಮ ಠಾಣಾ ಸಿಬ್ಬಂದಿಯನ್ನು ಕಳುಹಿಸಿಕೊಟ್ಟಿರುತ್ತೇನೆ. ರಾಸಾಯನಿಕ ವರದಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು **ನಿಪಿ-4** ಎಂದು ಸಾಕ್ಷಿಯ ಸಹಿಯನ್ನು **ನಿಪಿ-4(ಎ)** ಎಂದು ಗುರುತಿಸಲಾಯಿತು. ದಿಃ 15.07.2017 ರಂದು ಆರೋಪಿಯ ವಿರುದ್ಧ ಅಂತಿಮ ವರದಿ ಸಲ್ಲಿಸಿರುತ್ತೇನೆ. ದಿಃ 04.12.2017 ರಂದು ಉಳಿದ ಮದ್ಯದ ಪೌಚುಗಳನ್ನು ನ್ಯಾಯಾಲಯದ ಅನುಮತಿ ಪಡೆದು ಅಬಕಾರಿ ಇಲಾಖೆಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ದಾಖಲೆಯನ್ನು **ನಿಪಿ-5** ಎಂದು ಸಾಕ್ಷಿಯ ಸಹಿಯನ್ನು **ನಿಪಿ-5(ಎ)** ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸುತ್ತಾರೆ ಅವುಗಳನ್ನು ಈಗಾಗಲೇ ಮು.ಮಾ.1 ರಿಂದ 29 ಎಂದು ಗುರುತಿಸಲಾಗಿದೆ. ಆರೋಪಿಯನ್ನು ನೋಡಿ ಸಾಕ್ಷಿಯು ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಜಿ ವಕೀಲರಿಂದಃ**

ಚಾಸಾ1 ರವರಿಂದ ಕಡತವನ್ನು ಪಡೆದುಕೊಂಡು ನಾನು ಆರೋಪಿಯ ವಿರುದ್ಧ ಅಂತಿಮ ವರದಿ ಸಲ್ಲಿಸಸಿರುತ್ತೇನೆ ಎಂದು ತಾವು ಹೇಳಿದ್ದು ಮುಂದಿನ ತನಿಖೆಮಾಡಿದ್ದೀರಾ ಎಂದರೆ ಸಾಕ್ಷಿಯು ವಿಧಿ ವಿಜ್ಞಾನ ಕೇಂದ್ರದಿಂದ ವರದಿ ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ಆರೋಪಿತನಿಂದ ವಶಪಡಿಸಿಕೊಂಡ ಎಲ್ಲಾ ಸಾರಾಯಿ ಪೌಚುಗಳನ್ನು ರಾಸಯನಿಕ ಪರೀಕ್ಷೆಗೆ ಕಳುಹಿಸಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಆರೋಪಿಯು ಯಾವ ಮದ್ಯದ ಅಂಗಡಿಯಿಂದ ಮದ್ಯವನ್ನು ಖರೀದಿ ಮಾಡಿರುತ್ತಾನೆ ಎಂದು ತನಿಖೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ, ಯಾವುದೇ ತನಿಖೆ ಮಾಡದೆ ಆರೋಪಿಯ ವಿರುದ್ಧ ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ1 ರವರು ತಮ್ಮ ಠಾಣಾ ಅಂಕಿ ಅಂಶಗಳಿಗಾಗಿ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ನಾನು ಸುಳ್ಳು ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ವಿಧಿ ವಿಜ್ಞಾನ ಕೇಂದ್ರದಿಂದ ವರದಿ ಪಡೆದಿರುತ್ತೇನೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**